

**ಹಿಮಾಲಯದ ಮಡಿಲಲ್ಲಿರುವ ಪುಟ್ಟ ಊರು ನಾಮಿಕ್‌. ಜಗದ ಧಾವಂತಗಳಿಗೆಲ್ಲ ಬೆನ್ನು ಮಾಡಿ ನೆಮ್ಮದಿಯಿಂದ ಮಲಗಿರುವಂತೆ ತೋರುವ ಈ ಊರು ಹಿಮದ ನೆರಳಲ್ಲಿ ಅರಳಿದ ಬ್ರಹ್ಮಕಮಲದಷ್ಟೇ ಆಹ್ಲಾದ ಕೊಡುತ್ತದೆ.**

■ ಪ್ರವೀಣ್ ಹೆಗಡೆ, ಬಣಗಿ

ನಂದಕೋಟ್ ಪರ್ವತದ ಮೇಲೆ ಮೊದಲ ಉಷಾಕಿರಣ

ದೂಡುತ್ತವೆ. ಅದೋ ಬಿಸಿಲಕೋಲು ಎಂಬಷ್ಟರಲ್ಲಿ ಮೋಡಗಳು ದಾಂಗುಡಿಯಿಟ್ಟು ಚಿತ್ರವನ್ನು ಒರೆಸಿ ಹಾಕುತ್ತವೆ. ಹಾಗೆಂದು ಕ್ಯಾಮೆರಾ ಒಳಗಿಟ್ಟು ಕಣ್ಣು ಮುಚ್ಚಿದಿರೋ ಹಚ್ಚ ಹಸಿರ ಬೆಟ್ಟದ ಕವಲಿಗೆ ಸಿಕ್ಕಿಸಿಟ್ಟಂತಹ ಬಿಳಿ ನೊರೆಯ ಜಲಪಾತವನ್ನು ತಪ್ಪಿಸಿಕೊಳ್ಳಬೇಕು. ಗೋಗಿನಾ ಎಂಬ ಚಂದದ ಹೆಸರಿಗೆ ತಕ್ಕ ಊರದು. ಅಲ್ಲಿಗೆ ರಸ್ತೆಗಳ ಸಹವಾಸ ಮುಗಿಯುತ್ತದೆ. ಬೆಟ್ಟಕ್ಕೆ ಬೆಟ್ಟವೇ ಜರಿದು, ಕಡೆದ ರಸ್ತೆ ನಾಲ್ಕಾರು ವಾರ ಉಳಿದರೆ ಹೆಚ್ಚು ಎಂಬ ಜಾಗವಾದ್ದರಿಂದ, 'ರಸ್ತೆ ಸದ್ಯಕ್ಕಂತೂ ಇದೆ. ನೀವು ವಾಪಸ್ ಹೊರಡುವ ವೇಳೆ ಇಲ್ಲವಾದರೂ ಆಶ್ಚರ್ಯವಿಲ್ಲ' ಎಂಬ ಮಾತುಗಳು ನಮ್ಮನ್ನೇನೂ ಬಾಧಿಸಲಿಲ್ಲ. ಅಲ್ಲಿ ಸದಾ ಕಾಲ ಸನ್ನದ್ಧನೆಂಬಂತೆ ನಿಂತಿದ್ದ ದಢೂತಿ ರೋಡ್ ರೋಲರ್ 'ನಾನಿದ್ದೀನಿ, ಹೋಗಿಬನ್ನಿ' ಎಂಬಂತಿತ್ತು! ವ್ಯವಸ್ಥಿತವಾದ ಕುಟೀರದಲ್ಲಿ ಗೋಗಿನಾದಲ್ಲೇ ತಂಗಿದೆವು.

ಹೊತ್ತೊಯ್ದಿದ್ದ ಹೆಣಭಾರದ ಚೀಲಗಳನ್ನು ಮರುದಿನ ಗೋಗಿನಾದಲ್ಲಿ ಖೇಚರ್ ಎಂಬೋ ಕುದುರೆಗಳಿಗೆ ವರ್ಗಾಯಿಸಿ ನಿಸೂರಾದೆವು. ವ್ಯಾಪಾರಿ ಸಂಘಟನೆಗಳ ಬಗ್ಗೆ ಸಹಮತವಿಲ್ಲದ ಕಾರಣಕ್ಕೆ ನಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದೆವು. ನಮ್ಮೊಡನೆ ಒಬ್ಬ ಬಾಣಸಿಗ, 3 ಕುದುರೆಗಳು ಮತ್ತದರ ಮಾಲೀಕ (ಆತ ನಾಮಿಕ್‌ನವ) ಮಾತ್ರವೇ ಇದ್ದರು. ಗೋಗಿನಾದಿಂದ ಹೊರಟು ನಾಮಿಕ್ ಗ್ರಾಮ ತಲುಪುವುದು ಮೊದಲ ದಿನದ ಯೋಜನೆ. ನಂತರ ಅಂದುಕೊಂಡಿದ್ದು ಕಾಲು ಸೋಲುವವರೆಗೆ ಹೋಗಿ, ಸಾಕೆಂದಾಗ ವಾಪಸ್ ಬರುವುದು!



ಶಿಲ್ಪದಂತೆ ಕಾಣುವ ವೃಕ್ಷಗಳು

ನಡುಬೆಟ್ಟದಿಂದ ತಗ್ಗಿಳಿದು ರಾಮಗಂಗಾ ನದಿ ದಾಟಿ ಮತ್ತೆ ಎದುಸಿರು ಬಿಡುತ್ತಾ ಮೇಲೆ ಹತ್ತಿದರೆ ನಾಮಿಕ್ ಸಿಗುವುದು. ಭೋರ್ಗರೆವ ರಾಮಗಂಗಾ ನದಿಗೆ ಒಂದು ಸೇತುವೆಯಿದೆ. ಅದು ಗಟ್ಟಿಮುಟ್ಟಾಗಿದ್ದರೂ ರಾಮಗಂಗಾ ಸುಮ್ಮನೆಯಲ್ಲ. ಹರಿಯುವ ಭರದಲ್ಲಿ ಆಳೆತ್ತರದ ಕಲ್ಲುಗಳನ್ನೂ ಕುಟ್ಟಿ ಕೆಡವಿ ತೂರಿಕೊಂಡು ಸೇತುವೆಯ ಎರಡೂ ಪಾರ್ಶ್ವಗಳು ಮುಕ್ಕಾಗಿ ಶಿಥಿಲವಾಗಿವೆ. ಮುಂದೆ ಹತ್ತಿದರೆ ನಾಮಿಕ್. ಸುಮಾರು 50–80 ಮನೆಗಳ ಊರು. ಬಯಲು, ತಿಟ್ಟು, ಗದ್ದೆ, ಹೊಂಡ, ಮನೆ, ಮರಗಳೆಲ್ಲವೂ ಒಂದರೊಳಗೊಂದು ಅಡ್ಡಾದಿಡ್ಡಿ ನೇಯ್ಗೆ ಹಾಕಿದಂತಿದೆ. ಥೇಟ್ ಮಲೆನಾಡಿನಂತೆ!

ನಾಮಿಕ್ ಆ ಸಾಲಿನ ಕೊನೇ ಹಳ್ಳಿ. ಮೂಲ ಸೌಕರ್ಯಗಳಿಗೇನೂ ಬಡಿದಾಡದ, ಅಗತ್ಯಕ್ಕಿಂತ ಹೆಚ್ಚು ಬೇಕೂ ಇಲ್ಲದಂತಿರುವ ಪ್ರದೇಶ. ಪುರಾತನ ಭಾರತ–ಟಿಬೆಟ್ ಕಾಲುಹಾದಿ ಅಲ್ಲೇ ಹಾದು ಹೋಗಿರುವುದು ವಿಶೇಷ. ಕೆಲವೆಡೆ ದಾರಿಗೆ ಶಿಸ್ತಾಗಿ ಕಲ್ಲು ಹಾಸಿ ರೂಪು ಕೊಡಲಾಗಿದೆ. ಸವೆಸಿದಷ್ಟೂ ಮುಗಿಯದಂತೆ ಕಾಣುವ ದಾರಿ ಬೆಟ್ಟದ ತಗ್ಗೆತ್ತರಕ್ಕೂ ಆತು ಮಲಗಿದೆ. ನಡು ನಡುವೆ ದಾರಿ ತಪ್ಪಲಾಗದಂತೆ ಕಲ್ಲುಗಳ ಮೇಲೆ ಕಲ್ಲು ಜೋಡಿಸಿ ಕಂಬದ ರಚನೆಗಳನ್ನೂ ಮಾಡಲಾಗಿದೆ.

ದವಾಖಾನೆಯಿಲ್ಲದೆ ಮಾತ್ರೆ, ಔಷಧಿಗಳಿಗೆ ಅಂಗಲಾಚುವ ಹಳ್ಳಿಗರು ಮೊಬೈಲ್ ಹಿಡಿದು ಅಣಕಿಸುವಂತೆ ಕೂತಿದ್ದರು. ಇದ್ದ ಒಂದೇ ಕಿರು ಜಲವಿದ್ಯುತ್ ಘಟಕ ಸುಟ್ಟುಹೋಗಿ ತಿಂಗಳುಗಟ್ಟಲೇ ಕರೆಂಟಿಲ್ಲದೆ ಕಳೆಯುತ್ತಿದ್ದ ಅಲ್ಲಿನವರು ಮೊಬೈಲ್ ಚಾರ್ಜ್‌ಗೆ ಬಿಟ್ಟರೆ ಕರೆಂಟಿನ ಅಗತ್ಯವೇನೂ ವಿಶೇಷವಾಗಿ ಇರಲಿಲ್ಲವೆಂಬಂತೆ ಇದ್ದರು. ಹೆಂಗಸರ




ಶ್ರೀ ಆದಿಶಕ್ತಿ ಜ್ಯೋತಿಷ್ಯ ಪೀಠಂ

Your all problems 100% solutions

ಪ್ರಧಾನ ತಾಂತ್ರಿಕ್ ಶ್ರೀ ರಾಘವೇಂದ್ರ ಶರ್ಮ ಗುರೂಜಿ

ತಮ್ಮ ಅತ್ಯನ್ನತ ಜ್ಯೋತಿಷ್ಯ ಜ್ಞಾನದಿಂದ ಸಕಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತಾರೆ.

ದೈವಪ್ರಶ್ನೆ, ಅಷ್ಟಮಂಗಲ ಪ್ರಶ್ನೆ, ಅಂಜನಪ್ರಶ್ನೆ ನೋಡಿ ಸಂಪೂರ್ಣ ಭವಿಷ್ಯ ತಿಳಿಸುತ್ತಾರೆ.

ಧನವಶ, ಜನವಶ, ಭೂಮಿವಶ, ಶತ್ರುನಾಶ, ಕೋರ್ಟ್–ಕೇಸ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ–ಪುರುಷ ವಶೀಕರಣ, ಇನ್ನು ಸಮಸ್ಯೆ ಏನೇ ಇದ್ದರು ಕೇರಳದ ಕೊಳ್ಳೇಗಾಲದ ಅಥರ್ವಣ ಬ್ರಹ್ಮ ತಂತ್ರದಲ್ಲಿ ವಿದ್ಯೆಯಿಂದ ಕೇವಲ 2 ದಿನದಲ್ಲಿ 100% ಪರಿಹಾರ ಶತಃಸಿದ್ಧ,

ನಮಗಿಂತ ಮೊದಲು ಬೇರೆಯಾರೆ ಪರಿಹಾರ ಮಾಡಿ ಕೊಟ್ಟಲ್ಲಿ ಸೂಕ್ತ ಬಹುಮಾನ ನೀಡಲಾಗುತ್ತದೆ.

ವಿ.ಸೂ: ಸ್ತ್ರೀಯರಿಗೆ ಫೋನಿನ ಮೂಲಕ ನೇರ ಪರಿಹಾರ ನೀಡುತ್ತಾರೆ

ವಿಳಾಸ: ಶ್ರೀ ಬಂಡೇ ಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವಿಪುರಂ ಗುಟ್ಟಹಳ್ಳಿ, ಬೆಂಗಳೂರು

9620201188